ಮೂಲ ದಾವಾ ಸಂಖ್ಯೆ. 84/2017 ಪಿ ಡಬ್ಲ್ಯೂ 4

(ದಿನಾಂಕ 29-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿಗಳ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ನನಗೆ ಯಾವುದೇ ಭಾಷೆಯನ್ನು ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆನ್ನುವ ವಿಚಾರ ನನಗೆ ಗೊತ್ತಿಲ್ಲ. ವಾದಿಯ ಕೋರಿಕೆ ಮೇರೆಗೆ ನಾನು ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ಸಹಿ ಮಾಡಿರುತ್ತೇನೆ. ವಾದಿ ನನಗೆ ಚಿಕ್ಕಮ್ಮನಾಗಬೇಕು.

ನನ್ನ ತಂದೆ ಈಗ ಸುಮಾರು 3 ವರ್ಷದ ಹಿಂದೆ ಮರಣ ಹೊಂದಿದ್ದಾರೆ. ನಮ್ಮ ತಂದೆಯವರಿಗೆ ಓದಲು ಬರೆಯಲು ಬರುತ್ತಿತ್ತು. ನನ್ನ ತಂದೆಯವರು ಸಹಿ ಮಾಡುತ್ತಿದ್ದರು. ಸಾಕ್ಷಿಗೆ ನಿಪಿ-16 ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಜಮೀನನ್ನು ಮೆಹರಿಗೆ ಬರೆದುಕೊಟ್ಟವರ ಸಹಿ ಅಂತಾ ಇರುವ ಸಹಿಯನ್ನು ನಮ್ಮ ತಂದೆಯ ಸಹಿ ಅಂತಾ ನೋಡಿ ಗುರುತಿಸಿದ್ದು ಅದನ್ನು ನಿಪಿ-16 ಡಿ ಎಂದು ಗುರುತಿಸಲಾಯಿತು. ನಮ್ಮ ತಂದೆಯವರು ಅವರ ಜೀವಿತಾವಧಿಯಲ್ಲಿ ನಮ್ಮ ಜೊತೆ ವಾಸವಾಗಿದ್ದರು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ